**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 769/2025 **PW** –2

**ದಿಃ26.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮಧ್ಯಂತರ ಅರ್ಜಿ ನಂಬರ 1 ರ ಮೇಲಿನ ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ವಿ ಟಿ ಕೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅದಿಕಾರ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ 1 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ಪಿ ಎಂ ಸಿ ರವರಿಂದ.**

ಸದರಿ ಪ್ರಕರಣವನ್ನು ದಾಖಲೆ ಮಾಡಲು ಮಾಹಿತಿಯನ್ನು ನಮ್ಮ ಕಚೇರಿಯಿಂದ ಕೊಟ್ಟಿರುತ್ತೇವೆ. ಈ ಕೇಸನ ಸಂಪೂರ್ಣ ಮಾಹಿತಿ ನನಗೆ ಇದೆ. ಸದರಿ ಪ್ರಕರಣದಲ್ಲಿ ನಾನು ಒಂದು ಅರ್ಜಿ ಸಲ್ಲಿಸಿದ್ದು ಅದನ್ನು ನೋಡಿಕೊಂಡು ಬಂದು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮಧ್ಯಂತರ ಅರ್ಜಿ ಎನು ಎಂದರೆ ಸಾಕ್ಷಿ ಕೋರ್ಟಗೆ ಸಲ್ಲಿಸುವಾಗ delay ಆಗಿದೆ ಆ ಕಾರಣಕ್ಕೆ ಎಂದು ನುಡಿಯುತ್ತಾರೆ. ಎಷ್ಟು delay ಆಗಿದೆ ಎಂದರೆ 4 ವರ್ಷ ಎನ್ನುತ್ತಾರೆ. ಯಾವಾಗ ಅಪಘಾತವಾಗಿದೆ ಎಂದರೆ ಸಾಕ್ಷಿ 2021 ರಲ್ಲಿ ದಿನಾಂಕ ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಅಪಘಾತವಾಗಿತ್ತು ಎಂದರೆ ಸಾಕ್ಷಿ ನೂಲ್ವಿ ಕ್ರಾಸ ಬಳಿ ಎನ್ನುತ್ತಾರೆ. ಸದರಿ ಅಪಘಾತದ ಬಗ್ಗೆ ದೂರು ಯಾರು ಕೊಟ್ಟಿದ್ದರು ಎಂದರೆ



ಸಾಕ್ಷಿ ನಮ್ಮ ಚಾಲಕ ಕೊಟ್ಟಿದ್ದನು, ಅವರ ಹೆಸರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಯಾವ ಕಾರಣಕ್ಕೆ delay ಆಗಿದೆ ಎಂದು ಬರೆದಿದ್ದೀರಿ ಎಂದರೆ ಸಾಕ್ಷಿ ಬಸ್ಸನ ಜಖಂಗಳ ಬಗ್ಗೆ ನಿಖರವಾದ ಮಾಹಿತಿ ಬರುವುದು ತಡವಾಗಿದ್ದರಿಂದ ಎನ್ನುತ್ತಾರೆ. ಸದರಿ delay ನಿಮ್ಮ ಕಂಪನಿಯವರ ನಿರ್ಲಕ್ಷತನದಿಂದ ಆಗಿದೆ ಎಂದರೆ ಸಾಕ್ಷಿ ಅದರ ವೆಚ್ಚ ಗೊತ್ತಿಲ್ಲದೆ ಮಾಡಲು ಬರುವುದಿಲ್ಲವೆಂದು ನುಡಿಯುತ್ತಾರೆ. ಆ ರೀತಿ

ಯಾವುದೇ ಕಾರಣ ಇಲ್ಲದಿದ್ದರು ನಾನು ಆ ಕಾರಣವನ್ನು ಹುಟ್ಟಿ ಹಾಕಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಬಸ್ಸಗೆ ಹೆಚ್ಚಿನ ಜಖಂ ಆಗಿರಲಿಲ್ಲ ಆ ಕಾರಣಕ್ಕೆ ಡ್ಯಾಮೇಜ್ಸ ಕ್ಲೇಮ ಮಾಡುವುದು ಬೇಡಾ ಎಂದು ಬಿಟ್ಟಿದ್ದು ಈಗ ವಿನಾಃಕಾರಣ ಈ ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕೇಸ ದಾಖಲಿಸಲು ಜಖಂಗಳ ದಾಖಲೆ ಅವಶ್ಯಕತೆ ಇರಲಿಲ್ಲ ಆದರು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ರೀತಿ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿ. ನನ್ನ ಅರ್ಜಿಯ ಜೊತೆಯಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಕಾರಣಗಳು ಬೇರೆ ಇರುತ್ತವೆ ಹಾಗೂ ನಾನು ಹೇಳುತ್ತಿರುವ ಕಾರಣಗಳೆ ಬೇರೆ ಎಂದರೆ ಸರಿಯಲ್ಲ. ಸದರಿ delay ಯನ್ನು condone ಮಾಡುವ ಸುಳ್ಳು ಕಾರಣಗಳನ್ನು ನಾನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಹೇಳಿರುವ ಕಾರಣಗಳು ಪರಿಗಣಿಸಲು ಬರುವುದಿಲ್ಲ ಆ ಕಾರಣಕ್ಕೆ ನನ್ನ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ